


بسم اللهِ الرّحمٰن الرّحيم

# ಹಝ್ರತ್ ಪೈಗಂಬರ್(ಸ)ರ ಆರಾಧನೆ ಮತ್ತು ದೈವಿಕ ಪ್ರೇಮ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16–01–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّآ إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ನಾನು ಕಳೆದ ಒಂದು ಖುತ್ಬದಲ್ಲಿ ಹಝ್ರತ್ ಪೈಗಂಬರ್(ಸ)ರ ಜೀವನ ಚರಿತ್ರೆಯ ಹಿನ್ನೆಲೆಯಲ್ಲಿ, ಅವರಲ್ಲಿದ್ದ ದೈವಿಕ ಪ್ರೇಮದ ಬಗ್ಗೆ ಹೇಳಿದ್ದೆ. ಇಂದು ಆ ವಿಷಯದ ಕುರಿತಾಗಿಯೇ ಇನ್ನೂ ಹೆಚ್ಚಿನ ವಿಷಯಗಳನ್ನು ವಿವರಿಸುತ್ತೇನೆ.

ಯೌವನದಲ್ಲಿ ಮತ್ತು ಪ್ರವಾದಿತ್ವದ ವಾದಕ್ಕಿಂತ ಮುಂಚೆಯೂ ಹಝ್ರತ್ ಪೈಗಂಬರ್(ಸ)ರಲ್ಲಿ ದೈವಿಕ ಪ್ರೇಮದ ಆವೇಶ ಎಷ್ಟಿತ್ತೆಂದರೆ, ಅವರು ತಳಮಳಗೊಂಡು ಗುಹೆಯೊಳಗೆ ಹೋಗಿ ತಮ್ಮ ಪ್ರಿಯ ಪ್ರಭುವಿನೊಂದಿಗೆ ಸಂಭಾಷಣೆಯಲ್ಲಿ ಮತ್ತು ಆರಾಧನೆಯಲ್ಲಿ ಮಗ್ನರಾಗುತ್ತಿದ್ದರು. ಇದೇ ಪ್ರೇಮದ ಬಗ್ಗೆ ಉಲ್ಲೇಖಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ವಿವರಿಸುತ್ತಾರೆ: "...ನಿಜವಾದ ವಿಷಯವೇನೆಂದರೆ, ಅಲ್ಲಾಹನೊಂದಿಗೆ ಪ್ರೀತಿ ಮತ್ತು ಒಲವು ಉಂಟಾಗುವಾಗ ಲೋಕ ಮತ್ತು ಲೌಕಿಕ ಜನರ ಬಗ್ಗೆ ಒಂದು ರೀತಿಯ ವಿರಕ್ತಿ ಮತ್ತು ಅಸಹ್ಯ ಉಂಟಾಗುತ್ತದೆ. ಸಹಜವಾಗಿಯೇ ಏಕಾಂತತೆ ಇಷ್ಟವಾಗತೊಡಗುತ್ತದೆ. ಹಝ್ರತ್ ಪೈಗಂಬರ್(ಸ)ರ ಸ್ಥಿತಿಯೂ ಇದೇ ಆಗಿತ್ತು. ಅಲ್ಲಾಹನ ಪ್ರೇಮದಲ್ಲಿ ಅವರು ಎಷ್ಟು ಲೀನವಾಗಿದ್ದರೆಂದರೆ, ಅವರಿಗೆ ಆ ಏಕಾಂತದಲ್ಲೇ ಸಂಪೂರ್ಣ ಆನಂದ ಮತ್ತು ತೃಪ್ತಿ ಸಿಗುತ್ತಿತ್ತು. ಯಾವುದೇ ಆರಾಮ ಅಥವಾ ಸೌಕರ್ಯಗಳಿಲ್ಲದ ಮತ್ತು ಹೋಗಲು ಕೂಡ ಭಯವಾಗುವಂತಹ ಸ್ಥಳದಲ್ಲಿ ಅವರು ಅನೇಕ ರಾತ್ರಿಗಳನ್ನು ಒಂಟಿಯಾಗಿ ಕಳೆಯುತ್ತಿದ್ದರು. ಇದರಿಂದ ಅವರು ಎಷ್ಟು ಧೈರ್ಯಶಾಲಿ ಮತ್ತು ಶೌರ್ಯವಂತರಾಗಿದ್ದರು ಎಂಬುದು ಕೂಡಾ ತಿಳಿದುಬರುತ್ತದೆ. ಅಲ್ಲಾಹನೊಂದಿಗಿನ ಸಂಬಂಧವು ಗಾಢವಾಗುವಾಗ ಶೌರ್ಯವು ತಾನಾಗಿಯೇ ಬರುತ್ತದೆ. ಆದ್ದರಿಂದಲೇ ಸತ್ಯವಿಶ್ವಾಸಿಯು ಎಂದಿಗೂ ಹೇಡಿಯಾಗಿರುವುದಿಲ್ಲ; ಲೌಕಿಕ ಜನರು ಹೇಡಿಗಳಾಗಿರುತ್ತಾರೆ, ಅವರಲ್ಲಿ ನಿಜವಾದ ಶೌರ್ಯ ಇರುವುದಿಲ್ಲ."

(ಹಿರಾ ಗುಹೆಯಲ್ಲಿನ ದೈವಿಕ ಆರಾಧನೆಯ ಬಗ್ಗೆ ಪ್ರಸ್ತಾಪಿಸುತ್ತಾ, ಹಝ್ರತ್ ಆಯಿಶ(ರ) ವಿವರಿಸಿದ ಒಂದು ಹದೀಸನ್ನು ಹುಝೂರ್ ವಿಶದವಾಗಿ ವಿವರಿಸಿದರು.)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಅಲ್ಲಾಹನು ತನ್ನ ಅನುಗ್ರಹವನ್ನು ಪ್ರಯತ್ನ ಮತ್ತು ಶ್ರಮದ ಮೇಲೆ ಅವಲಂಬಿತವಾಗಿ ಇರಿಸಿದ್ದಾನೆ. ಇದರಲ್ಲಿ ಸಹಾಬಿಯರ ಜೀವನ ಕ್ರಮವು ನಮಗೆ ಒಂದು ಆದರ್ಶ ಮತ್ತು ಉತ್ತಮ ಮಾದರಿಯಾಗಿದೆ. ಸಹಾಬಿಯರ ಜೀವನವನ್ನು ಒಮ್ಮೆ ಗಮನಿಸಿ ನೋಡಿರಿ! ಅವರು ಕೇವಲ ಸಾಧಾರಣ ನಮಾಝ್‌ಗಳಿಂದಲೇ ಅಂತಹ ಉನ್ನತ ಸ್ಥಾನಗಳನ್ನು ಪಡೆದುಕೊಂಡರೇ? ಅಲ್ಲ, ಬದಲಾಗಿ ಅವರು ಅಲ್ಲಾಹನ ಸಂಪ್ರೀತಿಯನ್ನು ಪಡೆಯಲು ತಮ್ಮ ಪ್ರಾಣದ ಹಂಗನ್ನು ಕೂಡ ತೊರೆದರು ಮತ್ತು ಕುರಿ–ಮೇಕೆಗಳಂತೆ ಅಲ್ಲಾಹನ ಮಾರ್ಗದಲ್ಲಿ ಬಲಿಯಾದರು. ಆಗಲೇ ಅವರಿಗೆ ಅಂತಹ ಸ್ಥಾನ ಲಭಿಸಿತು."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನಾವು ಅನೇಕ ಜನರನ್ನು ನೋಡಿದ್ದೇವೆ, ಅವರು ಕೇವಲ ಒಂದು ಮಂತ್ರದ ಮೂಲಕ ತಮಗೆ ಉನ್ನತ ಸ್ಥಾನಗಳು ಲಭಿಸಲಿ ಮತ್ತು ಅಲ್ಲಾಹನ ಸಿಂಹಾಸನದ ತನಕ ತಮಗೆ ಪ್ರವೇಶ ಲಭಿಸಲಿ ಎಂದು ಬಯಸುತ್ತಾರೆ." "ನಮ್ಮ ಪ್ರವಾದಿ(ಸ)ರಿಗಿಂತ ಶ್ರೇಷ್ಠರು ಯಾರಿದ್ದಾರೆ? ಅವರು ಮಾನವಕುಲದಲ್ಲೇ ಶ್ರೇಷ್ಠರು ಮತ್ತು ಪ್ರವಾದಿಗಳಲ್ಲಿ ಶ್ರೇಷ್ಠರು ಆಗಿದ್ದರು. ಅವರೇ ಅಂತಹ ಸುಲಭದ ದಾರಿಗಳಿಂದ ಹೋಗದೇ ಕಷ್ಟಪಟ್ಟಿರುವಾಗ, ಅದನ್ನು ಮಾಡಲು ಸಾಧ್ಯವಿರುವ ಬೇರೆ ಯಾರಿದ್ದಾರೆ? ನೋಡಿರಿ, ಹಝ್ರತ್ ಪೈಗಂಬರ್(ಸ) ಹಿರಾ ಗುಹೆಯಲ್ಲಿ ಎಂತಹ ಕಠಿಣತೆಯನ್ನು ಸಹಿಸಿದ್ದರು ಎಂಬುದು ಅಲ್ಲಾಹನೇ ಬಲ್ಲನು. ದೀರ್ಘ ಕಾಲದವರೆಗೆ ಅವರು ರೋದಿಸುತ್ತಾ ಅಲ್ಲಾಹನ ಮೊರೆ ಹೋಗುತ್ತಿದ್ದರು, ಆತ್ಮದ ಶುದ್ಧೀಕರಣಕ್ಕಾಗಿ ಅವರು ಎಂತಹ ಪ್ರಯತ್ನ ಮತ್ತು ಕಠಿಣ ಪರಿಶ್ರಮವನ್ನು ಪಟ್ಟರು, ಆಗ ಮಾತ್ರ ದೈವಿಕ ಅನುಗ್ರಹವು ಅವರ ಮೇಲೆ ವರ್ಷಿಸಿತು."

(ಹುಝೂರ್ ಹೇಳಿದರು:) "ಅಲ್ಲಾಹನ ಪ್ರೇಮದಲ್ಲಿ ಹಝ್ರತ್ ಪೈಗಂಬರ್(ಸ)ರ ನಮಾಝ್‌ಗಳ ಸ್ಥಿತಿ ಹೇಗಿತ್ತೆಂದರೆ – ಮುತರ್ರಫ್ ತಮ್ಮ ತಂದೆಯಿಂದ ಹೀಗೆ ವರದಿ ಮಾಡುತ್ತಾರೆ: ನಾನು ಹಝ್ರತ್ ಪೈಗಂಬರ್(ಸ)ರ ಬಳಿ ಹೋದಾಗ ಅವರು

ನಮಾಝ್ ಅನುಷ್ಠಿಸುತ್ತಿದ್ದರು. ಅವರ ಎದೆಯಿಂದ ಕುದಿಯುತ್ತಿರುವ ಪಾತ್ರೆಯ ಶಬ್ದದಂತೆ ಶಬ್ದ ಹೊರಬರುತ್ತಿತ್ತು. ಅವರು ಎಷ್ಟು ತೀವ್ರವಾಗಿ ಅಳುತ್ತಿದ್ದರು ಮತ್ತು ರೋದಿಸುತ್ತಿದ್ದರೆಂದರೆ, ಪಾತ್ರೆಯಲ್ಲಿ ನೀರು ಕುದಿಯುತ್ತಿರುವಂತೆ ಭಾಸವಾಗುತ್ತಿತ್ತು."

ಹಝ್ರತ್ ಆಯಿಶ(ರ)ರ ವರದಿಯ ಪ್ರಕಾರ, ಹಝ್ರತ್ ಪೈಗಂಬರ್(ಸ) ಎಷ್ಟೊಂದು ಆರಾಧನೆ ಮಾಡುತ್ತಿದ್ದರೆಂದರೆ ಮತ್ತು ಆರಾಧನೆಯ ಸಮಯದಲ್ಲಿ ಎಷ್ಟು ದೀರ್ಘಕಾಲ ನಿಲ್ಲುತ್ತಿದ್ದರೆಂದರೆ, ಅವರ ಪಾದಗಳು ಊದಿಕೊಳ್ಳುತ್ತಿದ್ದವು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಪೈಗಂಬರರ(ಸ) ಪ್ರೇಮ ಮತ್ತು ಆರಾಧನೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಒಂದೆಡೆ ಹೀಗೆ ಹೇಳುತ್ತಾರೆ – "ಹಝ್ರತ್ ಆಯಿಶ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ತಮ್ಮ ಅಂತಿಮ ಅನಾರೋಗ್ಯದ ಸಮಯದಲ್ಲಿ ತೀವ್ರ ದೌರ್ಬಲ್ಯದಿಂದಾಗಿ ನಮಾಝಿಗೆ ಇಮಾಮತ್ ವಹಿಸಲು ಶಕ್ತರಾಗಿರಲಿಲ್ಲ. ಆದ್ದರಿಂದ ಅವರು ಹಝ್ರತ್ ಅಬೂಬಕರ್(ರ)ರೊಡನೆ ನಮಾಝಿಗೆ ಇಮಾಮತ್ ವಹಿಸಲು ಆದೇಶಿಸಿದರು. ಈ ಆದೇಶ ನೀಡಿದ ನಂತರ ಹಝ್ರತ್ ಪೈಗಂಬರ್(ಸ)ರಿಗೆ ತಮ್ಮ ರೋಗದಲ್ಲಿ ಸ್ವಲ್ಪ ಚೇತರಿಕೆ ಅನುಭವವಾದಾಗ, ಅವರು ಇಬ್ಬರು ವ್ಯಕ್ತಿಗಳ ಆಸರೆಯೊಂದಿಗೆ ನಮಾಝ್‌ಗಾಗಿ ಹೊರಬಂದರು. (ಹಝ್ರತ್ ಆಯಿಶ(ರ) ಹೇಳುತ್ತಾರೆ) – 'ಆ ಸಮಯದ ಆ ದೃಶ್ಯವು ಇಂದಿಗೂ ನನ್ನ ಕಣ್ಣಮುಂದಿದೆ, ತೀವ್ರ ನೋವಿನ ಕಾರಣದಿಂದಾಗಿ ಹಝ್ರತ್ ಪೈಗಂಬರ್(ಸ)ರ ಪಾದಗಳು ನೆಲಕ್ಕೆ ತಾಗುತ್ತಿದ್ದವು.'

ಈ ಹದೀಸ್‌ನಿಂದ ನಮಗೆ ತಿಳಿದುಬರುವುದೇನೆಂದರೆ, ಹಝ್ರತ್ ಪೈಗಂಬರ್(ಸ)ರಿಗೆ ಎಂತಹ ತೀವ್ರ ಕಾಯಿಲೆ ಇದ್ದರೂ ಅವರು ದೇವಸ್ಮರಣೆಯನ್ನು ಮರೆಯುತ್ತಿರಲಿಲ್ಲ. ಸ್ವಲ್ಪ ತೊಂದರೆಯಾದರೆ ಕೂಡ ಎಲ್ಲ ಆರಾಧನೆಗಳನ್ನೂ ಮರೆತುಬಿಡುವ ಜನರನ್ನು ಸಾಮಾನ್ಯವಾಗಿ ನಾವು ಕಾಣುತ್ತೇವೆ. ಖಂಡಿತವಾಗಿಯೂ ಮೇಲ್ನೋಟಕ್ಕೆ ಇದು ಸಾಮಾನ್ಯ ವಿಷಯದಂತೆ ತೋರಬಹುದು, ಆದರೆ ರಸೂಲುಲ್ಲಾಹ್(ಸ)ರ ಆ ಸ್ಥಿತಿಯನ್ನು ಒಮ್ಮೆ ನೋಡಿ. ದೇವಸ್ಮರಣೆಯ ಉತ್ಸಾಹ ಅವರಿಗೆ ಎಷ್ಟಿತ್ತೆಂದರೆ, ಇಬ್ಬರು ವ್ಯಕ್ತಿಗಳ ಭುಜದ ಮೇಲೆ ಕೈಯಿಟ್ಟು ಅವರು ನಮಾಝ್‌ಗಾಗಿ ಆಗಮಿಸಿದರು. ಆದ್ದರಿಂದ ಈ ಘಟನೆಯು ಕೇವಲ ಒಂದು ಸಾಧಾರಣ ಘಟನೆಯಲ್ಲ, ಬದಲಾಗಿ ಹಝ್ರತ್ ಪೈಗಂಬರ್(ಸ)ರ ಹೃದಯದಲ್ಲಿದ್ದ ದೇವಸ್ಮರಣೆಯ ಹಂಬಲದ ಪ್ರತಿಬಿಂಬವಾಗಿದೆ ಎಂಬುದು ಸ್ಪಷ್ಟವಾಗುತ್ತದೆ."

ಪ್ರತಿಯೊಬ್ಬ ವಿವೇಕಿಯೂ ತಿಳಿದುಕೊಳ್ಳಬಹುದಾದ ವಿಷಯವೇನೆಂದರೆ, ದೇವಸ್ಮರಣೆಯು ಹಝ್ರತ್ ಪೈಗಂಬರರ(ಸ) ಆಹಾರವಾಗಿತ್ತು ಮತ್ತು ಅದಿಲ್ಲದೆ ಅವರು ತಮ್ಮ ಜೀವನದಲ್ಲಿ ಯಾವುದೇ ಆನಂದವನ್ನು ಪಡೆಯುತ್ತಿರಲಿಲ್ಲ. ಇದನ್ನೇ ಸೂಚಿಸುತ್ತಾ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: "ನನಗೆ ಪ್ರಿಯವಾದ ವಸ್ತುಗಳಲ್ಲಿ ಒಂದು ನಮಾಝ್ ಆಗಿದೆ. 'ಖುರ್ರತು ಐನೀ ಫಿಸ್ಸಲಾತ್' ಅಂದರೆ, ನಮಾಝಿನಿಂದ ನನ್ನ ಕಣ್ಣುಗಳು ತಂಪಾಗುತ್ತವೆ."

(ಹುಝೂರ್ ಹೇಳುತ್ತಾರೆ:) "ಸತ್ಕರ್ಮಗಳು ಎಂದರೇನು ಮತ್ತು ಅಲ್ಲಾಹನು ನಮ್ಮ ಬಗ್ಗೆ ಸಂಪ್ರೀತನಾಗಿದ್ದಾನೆ ಎಂದು ನಮಗೆ ಹೇಗೆ ತಿಳಿಯಲು ಸಾಧ್ಯ ಎಂದು ಜನರು ಕೇಳುತ್ತಾರೆ ಮತ್ತು ಇಂದಿನ ಮಕ್ಕಳು ಹಾಗೂ ಯುವಕರು ಕೂಡ ಪದೇ ಪದೇ ಪ್ರಶ್ನಿಸುತ್ತಾರೆ. ಒಳ್ಳೆಯ ಕಾರ್ಯಗಳನ್ನು ಮಾಡುವುದರಿಂದ ಮತ್ತು ಅವುಗಳನ್ನು ಕೇವಲ ಅಲ್ಲಾಹನ ಸಂಪ್ರೀತಿಯನ್ನು ಪಡೆಯಲಿಕ್ಕಾಗಿ ಮಾತ್ರ ಮಾಡುವುದರಿಂದ ಅಲ್ಲಾಹನ ಸಂಪ್ರೀತಿಯನ್ನು ಗಳಿಸಬಹುದಾಗಿದೆ. ಮನುಷ್ಯನು ತನ್ನನ್ನು ಸ್ವತಃ ಪರೀಕ್ಷಿಸಿಕೊಳ್ಳಬಹುದು. ಇದಕ್ಕಾಗಿ ಹೊರಗಿನ ಯಾರನ್ನೂ ತೀರ್ಪುಗಾರರನ್ನಾಗಿ ಮಾಡುವ ಅಗತ್ಯವಿಲ್ಲ. ತಾನು ಮಾಡುತ್ತಿರುವ ಒಳಿತುಗಳು ಕೇವಲ ಅಲ್ಲಾಹನಿಗಾಗಿ ಮಾತ್ರ ಆಗಿದ್ದರೆ, ಅಲ್ಲಾಹನು ಖಂಡಿತವಾಗಿಯೂ ಅವುಗಳನ್ನು ಮೆಚ್ಚುತ್ತಾನೆ ಎಂಬುದನ್ನು ಮನುಷ್ಯನು ಸ್ವತಃ ಗೊತ್ತುಮಾಡಿಕೊಳ್ಳಬಲ್ಲನು."

ಹಝ್ರತ್ ಪೈಗಂಬರರ(ಸ) ಆರಾಧನೆಯು ಒಂದು ನಿರಂತರವಾದ ಸತ್ಕರ್ಮದಂತೆ ಇತ್ತು. ಅವರಲ್ಲಿ ಆರಾಧನೆಯ ಉತ್ಸಾಹವು ಸದಾ ಪ್ರಕಾಶಿಸುತ್ತಿತ್ತು. ಹಝ್ರತ್ ಪೈಗಂಬರ್(ಸ) ತಮ್ಮ ಪ್ರಭುವಿನ ಆರಾಧನೆಯಲ್ಲಿ ಎಷ್ಟು ಮಗ್ನರಾಗುತ್ತಿದ್ದರೆಂದರೆ ಮತ್ತು ಈ ರಹಸ್ಯ ಸಂಭಾಷಣೆಯ ಸರಣಿಯು ಎಷ್ಟು ವಿಸ್ತಾರವಾಗಿತ್ತೆಂದರೆ, ಅನೇಕ ಬಾರಿ ಆರಾಧನೆ ಮಾಡುತ್ತಾ ಮಾಡುತ್ತಾ ಅವರ ಪಾದಗಳು ಊದಿಕೊಳ್ಳುತ್ತಿದ್ದವು. 'ನಿಮಗೆ ಇಷ್ಟೊಂದು ಆರಾಧನೆಯ ಅವಶ್ಯಕತೆಯೇನು, ನಿಮ್ಮ ಪಾಪಗಳೆಲ್ಲವೂ ಕ್ಷಮಿಸಲ್ಪಟ್ಟಿವೆಯಲ್ಲವೇ?' ಎಂದು ಸಹಾಬಿಯರು ಕೇಳುವಾಗ ಹಝ್ರತ್ ಪೈಗಂಬರ್(ಸ) ಹೀಗೆ ಉತ್ತರ ನೀಡುತ್ತಿದ್ದರು: 'ನಾನು ಕೃತಜ್ಞತೆ ಅರ್ಪಿಸಬೇಡವೇ?'

(ಹುಝೂರ್ ಹೇಳುತ್ತಾರೆ:) ಅಲ್ಲಾಹ್, ಎಂತಹ ಪ್ರೇಮವಿದು! ಅಲ್ಲಾಹನ ನೆನಪಿನಲ್ಲಿ ಹಝ್ರತ್ ಪೈಗಂಬರ್(ಸ) ನಿಲ್ಲುವಾಗ ಅವರಿಗೆ ತಮ್ಮ ದೇಹದ ಅರಿವೇ ಇರುತ್ತಿರಲಿಲ್ಲ. ಜನರನ್ನು ಬೆಚ್ಚಿಬೀಳಿಸುವ ಮತ್ತು ನೋಡುವವರ ಮೇಲೆ ಪ್ರಭಾವ ಬೀರುವ ಆ ದೈಹಿಕ ನೋವುಗಳು ಹಝ್ರತ್ ಪೈಗಂಬರರ(ಸ) ಮೇಲೆ ಯಾವುದೇ ಪರಿಣಾಮ ಬೀರುತ್ತಿರಲಿಲ್ಲ. ಎಂತಹ ನಿಷ್ಠೆಯಿಂದ ಕೂಡಿದ ಮತ್ತು ಎಂತಹ ಕೃತಜ್ಞತೆಯನ್ನು ವ್ಯಕ್ತಪಡಿಸುವ ಉತ್ತರವಿದು! ಇದು ಹಝ್ರತ್ ಪೈಗಂಬರರ(ಸ) ಪವಿತ್ರ ಹೃದಯದ ಭಾವನೆಗಳನ್ನು ಬಿಚ್ಚಿಡುತ್ತದೆ.

ಇದೇ ವಿಷಯವನ್ನು ಮುಂದುವರೆಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಹಝ್ರತ್ ಪೈಗಂಬರ್(ಸ) ತಮ್ಮ ಕೆಲಸಗಳಲ್ಲಿ ನಿರತರಾಗಿರುತ್ತಿದ್ದರು. ಕೇವಲ ಆರಾಧನೆ ಮಾಡಿ ಸುಮ್ಮನೆ ಕುಳಿತುಬಿಡುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ)

ದಿನಪೂರ್ತಿ ಅಲ್ಲಾಹನ ನಾಮದ ಪ್ರಚಾರಕ್ಕಾಗಿ ಮತ್ತು ಅವನ ವಿಧೇಯತೆಯನ್ನು ಜಾರಿಗೆ ತರುವ ಪ್ರಯತ್ನದಲ್ಲಿ ತೊಡಗಿರುತ್ತಿದ್ದರು."

(ಹುಝೂರ್ ಹೇಳಿದರು:) ಒಟ್ಟಿನಲ್ಲಿ, ನಾವು ಹಝ್ರತ್ ಪೈಗಂಬರ್(ಸ)ರ ಮಾದರಿಗಳನ್ನು ಅನುಸರಿಸುತ್ತಾ ನಮಾಝ್ ಮತ್ತು ಆರಾಧನೆಗಳಲ್ಲಿ ಈ ಉನ್ನತ ಮಟ್ಟವನ್ನು ಗಳಿಸಲು ಪ್ರಯತ್ನಿಸಬೇಕು, ಆಗಲೇ ನಾವು ನಿಜವಾದ ಮುಸ್ಲಿಮರೆಂದು ಕರೆಯಲ್ಪಡಲು ಸಾಧ್ಯ.

ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಮೀರ್ ನಾಸಿರ್ ನವಾಬ್ ಸಾಹಿಬ್(ರ)ರಿಗೆ ಹೀಗೊಂದು ಪತ್ರವನ್ನು ಬರೆದರು: "ನೀವು ನಿಮ್ಮ ಕಾರ್ಯವೈಖರಿಗಾಗಿ ಕೇಳಿದ್ದ ವಿಷಯಕ್ಕೆ ಇರುವ ಉತ್ತರವೇನೆಂದರೆ, ನೀವು ಹಝ್ರತ್ ಪೈಗಂಬರ್(ಸ)ರನ್ನು ಸರಿಯಾಗಿ ಅನುಸರಿಸುವ ಕಡೆಗೆ ಒಲವು ತೋರಿಸಬೇಕು. ಹಝ್ರತ್ ಪೈಗಂಬರ್(ಸ) ಎರಡು ಕಾರ್ಯಗಳ ಕುರಿತು ಅತ್ಯಂತ ಹೆಚ್ಚಿನ ಪ್ರೀತಿಯನ್ನು ವ್ಯಕ್ತಪಡಿಸಿದ್ದರು. ಒಂದು ನಮಾಝ್ ಮತ್ತೊಂದು ಜಿಹಾದ್. ನನ್ನ ಕಣ್ಣುಗಳ ತಂಪು ನಮಾಝ್‌ನಲ್ಲಿದೆ ಎಂದು ನಮಾಝ್ ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದ್ದಾರೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಈ ಕಾಲದಲ್ಲಿ ಜಿಹಾದ್ ಆಧ್ಯಾತ್ಮಿಕ ರೂಪವನ್ನು ಪಡೆದುಕೊಂಡಿದೆ. ಇಸ್ಲಾಂ ಧರ್ಮದ ಸಂದೇಶವನ್ನು ಎತ್ತಿ ಹಿಡಿಯಲು ಪ್ರಯತ್ನಿಸುವುದೇ ಈ ಕಾಲದ ಧರ್ಮಯುದ್ಧ ಅಥವಾ ಜಿಹಾದ್ ಆಗಿದೆ. ಅಲ್ಲಾಹನು ಲೋಕದಲ್ಲಿ ಬೇರೆ ಯಾವುದಾದರೂ ಪರಿಸ್ಥಿತಿಯನ್ನು ಉಂಟುಮಾಡುವ ತನಕ ಇದೇ ಜಿಹಾದ್ ಆಗಿರುತ್ತದೆ."

(ಹುಝೂರ್ ನಮ್ಮ ಗಮನ ಸೆಳೆಯುತ್ತಾ ಹೀಗೆ ಹೇಳಿದರು:) ಒಂದು ವೇಳೆ ನಾವು ಈ ಜಿಹಾದ್‌ನಲ್ಲಿ ಪಾಲುದಾರರಾಗಲು ಬಯಸುವುದಾದರೆ, ನಾವು ಅಲ್ಲಾಹನ ಪ್ರೀತಿ ಮತ್ತು ದುಆಗಳ ಕಡೆಗೆ ಹಾಗೂ ನಮ್ಮ ಆರಾಧನೆಗಳ ಕಡೆಗೆ ಗಮನಹರಿಸಬೇಕಾಗುವುದು. ನಾವು ಹಝ್ರತ್ ಪೈಗಂಬರ್(ಸ)ರ ಮಾದರಿಗಳನ್ನು ಅನುಸರಿಸುತ್ತಾ ಈ ಕೆಲಸಗಳನ್ನು ಮಾಡುವಾಗ ಮಾತ್ರ ನಮ್ಮ ಕೆಲಸಗಳಲ್ಲಿ ಅನುಗ್ರಹ ಉಂಟಾಗುವುದು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಇಂದು ಬಂಗ್ಲಾದೇಶದ ಜಮಾಅತಿನ ಜಲ್ಸ ಸಹ ನಡೆಯುತ್ತಿದೆ. ಅಲ್ಲಿ ಜಮಾಅತಿನ ವಿರೋಧವು ಸಾಕಷ್ಟು ಇರುತ್ತದೆ. ಅವರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರೆಲ್ಲರನ್ನೂ ತನ್ನ ಸಂರಕ್ಷಣೆಯಲ್ಲಿ ಇರಿಸಲಿ ಮತ್ತು ಅವರ ಜಲ್ಸ ಸಹ ಯಾವುದೇ ಅಡೆತಡೆಯಿಲ್ಲದೆ ಯಶಸ್ವಿಯಾಗಿ ಮುಕ್ತಾಯಗೊಳ್ಳಲಿ.

——————————*****——————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

At, ***'Masjid Mubarak',*** *Islamabad, Tilford,* U.K. On 16-01-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon